ಅ) ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಬಡವರಿಗೆ ವಿದ್ಯುತ್ತನ್ನು ಉಚಿತವಾಗಿ ಕೊಡಲು ಸಾಧ್ಯವೇ;

ಆ) ವಿದ್ಯುತ್ ಬಿಲ್ಲನ್ನು ಪಾವತಿಸಲು ಬಾಕಿ ಉಳಿದಿರುವ ಭಾಗ್ಯಜ್ಯೋತಿ ಫಲಾನುಭವಿದಾರರಾದ ಬಡವರ ವಿದ್ಯುತ್ ಸಂಪರ್ಕವನ್ನು ತೆಗೆಯಲು ಆದೇಶ ಹೊರಡಿಸಲಾಗಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಯೋಜನೆಗಳಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆದಿರುವ ಬಡವರಿಗೆ ಮಾಹೆಯಾನ 18 ಯೂನಿಟ್ಟುಗಳವರೆಗೆ ಉಚಿತ ವಿದ್ಯುತ್ತನ್ನು ಸರಬರಾಜು ಮಾಡುವ ಬಗ್ಗೆ ಒಂದು ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಆ) ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ ವಿಧಿಸಲಾಗುತ್ತಿರುವ ವಿದ್ಯುತ್ ದರ ಮಾಜಿಯಾನ ಕೇವಲ ರೂ. 30.00 ಮಾತ್ರ ಪ್ರತಿ ಯೂನಿಟ್ಟು ವಿದ್ಯುತ್ ಸರಬರಾಜಿಗೆ ತಗಲುವ ವೆಚ್ಚ ರೂ. 3.73. ಆದರೆ, ಈ ದರವನ್ನು ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳಿಗೆ ವಿಧಿಸದೆಯೇಸ, ಪ್ರತಿ ಯೂನಿಟ್ಟಿಗೆ ರೂ.1.66 ಸಹಾಯ ಧನವನ್ನು ಸರ್ಕಾರವು ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳು ತಮಗೆ ವಿಧಿಸಲಾಗುತ್ತಿರುವ ಕಡಿಮೆ ದರವನ್ನು ಪಾವತಿಸಿ, ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಸಹಕರಿಸಬೇಕಾಗಿರುತ್ತದೆ. ಅಲ್ಲದೇ, ವಿದ್ಯುತ್ ಬಾಕಿಯನ್ನು ಕಂತುಗಳ ಮೂಲಕ ಪಾವತಿಸಲು ಸಹ ಅನುಕೂಲವನ್ನು ಕಲ್ಪಿಸಲಾಗಿರುತ್ತದೆ. ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳಿಂದಲೂ ಸಹ ಕನಿಷ್ಠ ಶೇಕಡ 25 ರಷ್ಟು ವಸೂಲಾತಿಯನ್ನು ಮಾಡುವ ದೃಷ್ಟಿಯಿಂದ, ಹೆಚ್ಚಿನ ಬಾಕಿ ಹೊಂದಿರುವ ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ ಸ್ಥಾವರಗಳು ಕಂತಿನ ಸೌಲಭ್ಯವನ್ನು ಪಡೆದುಕೊಂಡರೂ ಸಹ ಹಣವನ್ನು ಪಾವತಿಸದೇ ಇದ್ದಲ್ಲಿ, ಅನಿವಾರ್ಯ ಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುತ್ತದೆ.

722(1341) : ಶ್ರೀ ಈಶ್ವರಪ್ಪ ಕೆ.ಎಸ್ (ಶಿವಮೊಗ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆರಾಧನಾ ಯೋಜನೆ ಜಾರಿಗೆ ಬರುತ್ತದೆಯೇ;

ಆ) ಒಂದು ವಿಧಾನ ಸಭಾ ಕ್ಷೇತ್ರಕ್ಕೆ ಎಷ್ಟು ಹಣ ಮೀಸಲಿಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು)

ಅ) ಆರಾಧನಾ ಯೋಜನೆ 1991–1992ನೇ ಸಾಲಿನಿಂದ ಜಾರಿಯಲ್ಲಿದೆ.

ಆ) ಆರಾಧನಾ ಯೋಜನೆಗೆ ಆಯವ್ಯಯದಲ್ಲಿ ಒದಗಿಸುವ ಅನುದಾನವನ್ನು ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಸಮನಾಗಿ ಹಂಚಲಾಗುವುದು. 2004–05ನೇ ಸಾಲಿಗೆ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರೂ. 2.82 ಲಕ್ಷಗಳಂತೆ 224 ವಿಧಾನ ಸಭಾ ಕ್ಷೇತ್ರಗಳಿಗೆ ರೂ. 6,31,68,000–00ಗಳನ್ನು ಮಂಜೂರು ಮಾಡಿದೆ.

723(216) : ಶ್ರೀ ಗಂಗಾಧರ್ ನಾಗೇಶ್ ಭಟ್(ಕಾರವಾರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾರವಾರ ಬಂದರಿನಿಂದ ಯಾವ ಯಾವ ಶ್ರೇಣಿಯ ಕಲ್ಲಿದ್ದಲನ್ನು ಯಾವ ಕಂಟ್ರಾಕ್ಟರ್‌ಗಳಿಂದ ಯಾವ ಯಾವ ದೇಶಗಳಿಗೆ ಕಳುಹಿಸಲಾಗುತ್ತದೆ;

ಆ) ಇದರಿಂದ ಸರ್ಕಾರಕ್ಕೆ ಕಳೆದ ವರ್ಷ ಬಂದ ಆದಾಯವೆಷ್ಟು;

ಇ) ಕಲ್ಲಿದ್ದಲು ಸಂಗ್ರಹಣೆಗಾಗಿ ಕಾರವಾರದ ಸುತ್ತಮುತ್ತಲೂ ಎಷ್ಟು ಸ್ಥಳಗಳನ್ನು ಬಳಸಲಾಗುತ್ತಿದೆ;

ಈ) ಕಲ್ಲಿದ್ದಲು ಸಂಗ್ರಹಣೆಯಿಂದ ಹಾಗೂ ಸಾಗಾಣಿಕೆಯಿಂದ ಪರಿಸರ ಮತ್ತು ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕಾರವಾರ ಬಂದರಿನ ಮೂಲಕ ಕಲ್ಲಿದ್ದಲನ್ನು ರಫ್ತು ಮಾಡಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಉ) ಅನ್ವಯಿಸುವುದಿಲ್ಲ.

724(218) : ಶ್ರೀ ಗಂಗಾಧರ್ ನಾಗೇಶ್ ಭಟ್(ಕಾರವಾರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸದಾಶಿವಗಡ–ಲೊಂಡಾ ರಸ್ತೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಟೆಂಡರ್ ಕರೆದರೂ ಇದುವರೆಗೂ ಕೆಲಸ ಪ್ರಾರಂಭಿಸದಿರಲು ಕೆಲಸ ಕಾರಣವೇನು;

ಇ) ಈ ರಸ್ತೆ ಕಾಮಗಾರಿಯನ್ನು ಯಾವಾಗ ಮುಕ್ತಾಯಗೊಳಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಂದಿರುತ್ತದೆ. ಸದಾಶಿವಗಡ –ಲೊಂಡಾ ರಸ್ತೆಯ ಅಭಿವೃದ್ಧಿಯನ್ನು ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಈ ಮಾರ್ಗದಲ್ಲಿ ರಸ್ತೆಯು ಅಲ್ಲಲ್ಲಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ರೂ. 30 ಲಕ್ಷದ ಅನುದಾನವನ್ನು ಒದಗಿಸಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ವತಿಯಿಂದ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರ ವತಿಯಿಂದ ದುರಸ್ತಿ ಮಾಡಲಾಗುತ್ತಿದೆ.

ಆ) ಸದಾಶಿವಗಡ–ಲೊಂಡಾ ರಸ್ತೆಯು ಅಂಶಿ ರಾಷ್ಟ್ರೀಯ ವನ ಹಾಗೂ ದಾಂಡೇಲಿ ವನ್ಯಮೃಗ ಪ್ರದೇಶದಂತಹ ನೈಸರ್ಗಿಕ ಸೂಕ್ಷ್ಮ ಪ್ರದೇಶದಲ್ಲಿ ಹಾದು ಹೋಗುವುದರಿಂದ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳುವ ಮುಂಚೆ ಪರಿಸರ ಮತ್ತು ಅರಣ್ಯ ಮಂತ್ರಾಲಯ, ನವದೆಹಲಿ ಇವರಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಇದರ ಬಗ್ಗೆ ಅಕ್ಟೋಬರ್ 2003ರಲ್ಲಿ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಅರ್ಜಿಯನ್ನು ಸಹ ಸಲ್ಲಿಸಲಾಗಿದೆ. ಪರಿಸರ ಮತ್ತು ಅರಣ್ಯ ಮಂತ್ರಾಲಯ, ನವದೆಹಲಿ ಇವರಿಂದ ಅನುಮತಿ ಪಡೆದನಂತರ ಕೆಲಸವನ್ನು ಪ್ರಾರಂಭಿಸಲಾಗುವುದು.